All India Radio: Bangalore
National Bulletin In Kannada
23.02.2026  19.35 p.m.
ಆಕಾಶವಾಣಿ, ಬೆಂಗಳೂರು

ರಾಷ್ಟ್ರೀಯ ವಾರ್ತೆಗಳು

ಮುಖ್ಯಾಂಶಗಳು

- ಭಾರತದ ನೂತನ ರಾಷ್ಟ್ರೀಯ ಭಯೋತ್ಪಾದನಾ ನೀತಿ -'ಪ್ರಹಾರ್' ಬಿಡುಗಡೆ
- ಅರವತ್ತಕ್ಕೂ ಹೆಚ್ಚು ದೇಶಗಳೊಂದಿಗೆ ಸಂಸದೀಯ ಸ್ನೇಹ ಗುಂಪುಗಳ ರಚನೆ - ಲೋಕಸಭಾಧ್ಯಕ್ಷ ಓಂ ಬಿರ್ಲಾ
- ವಿಶ್ವದ ಮೂರನೇ ಅತಿ ದೊಡ್ಡ ಆರ್ಥಿಕತೆಯಾಗುವ ಹಾದಿಯಲ್ಲಿ ಭಾರತ - ಸೆಬಿ ಅಧ್ಯಕ್ಷ ತುಹಿನ್ ಕಾಂತ ಪಾಂಡೆ
- ಐಸಿಸಿ ಟಿ-೨೦ ವಿಶ್ವಕಪ್ ಕ್ರಿಕೆಟ್: ಸೂಪರ್ ೮ರ ಹಂತದ ಪಂದ್ಯದಲ್ಲಿ ವೆಸ್ಟ್ ಇಂಡೀಸ್ ವಿರುದ್ಧ ಟಾಸ್ ಗೆದ್ದ ಜಿಂಬಾಬ್ವೆ ಫೀಲ್ಡಿಂಗ್ ಆಯ್ಕೆ

****************

'ಪ್ರಹಾರ್' ಹೆಸರಿನ ಭಾರತದ ನೂತನ ರಾಷ್ಟ್ರೀಯ ಭಯೋತ್ಪಾದನಾ ವಿರೋಧಿ ನೀತಿ ಮತ್ತು ತಂತ್ರಗಾರಿಕೆಯನ್ನು ಕೇಂದ್ರ ಗೃಹ ಸಚಿವಾಲಯ ಇಂದು ಬಿಡುಗಡೆಗೊಳಿಸಿದೆ.

ಭಯೋತ್ಪಾದನಾ ಕೃತ್ಯಗಳನ್ನು ಸಮರ್ಥವಾಗಿ ನಿರ್ಬಂಧಿಸುವಲ್ಲಿ ಸಮಗ್ರ ಚೌಕಟ್ಟನ್ನು ಈ ತಂತ್ರಗಾರಿಕೆಯಲ್ಲಿ ಅಳವಡಿಸಿಕೊಳ್ಳಲಾಗಿದೆ. ಭಯೋತ್ಪಾದನಾ ಬೆದರಿಕೆ ಹೊಸ ಹೊಸ ರೀತಿಯಲ್ಲಿ ಉಗಮಿಸುತ್ತಿದ್ದು, ಈ ಕಾಲಘಟ್ಟಕ್ಕೆ ದೇಶವನ್ನು ಸಜ್ಜುಗೊಳಿಸಲು ಮತ್ತು ಅಂತಹ ದೇಶ ವಿರೋಧಿ ಕೃತ್ಯಗಳನ್ನು ಎದುರಿಸಲು ಪ್ರಹಾರ್ ನೀತಿ ಪ್ರಮುಖವಾಗಿದೆ ಎಂದು ಸಚಿವಾಲಯ ತಿಳಿಸಿದೆ.

ಭಾರತ ಎಂದಿಗೂ ಭಯೋತ್ಪಾದನಾ ಸಂತ್ರಸ್ತರ ಜೊತೆಗಿದ್ದು, ಹಿಂಸೆಯನ್ನು ಎಂದಿಗೂ ಒಪ್ಪಿಕೊಳ್ಳದ ನಿಲುವನ್ನು ಹೊಂದಿದೆ. ದೇಶ ಭಯೋತ್ಪಾದನೆಯ ವಿರುದ್ಧ ಶೂನ್ಯ ಸಹಿಷ್ಣತಾ ತತ್ವವನ್ನು ಅಳವಡಿಸಿಕೊಂಡಿದೆ ಎಂದು ಕೇಂದ್ರ ಗೃಹ ಸಚಿವಾಲಯ ಹೇಳಿದೆ.

****************

ಜಗತ್ತಿನೊಂದಿಗೆ ಭಾರತದ ಅಂತರ್ ಸಂಸದೀಯ ಸಂಬಂಧವನ್ನು ವಿಸ್ತರಿಸುವ ಮಹತ್ವದ ಹೆಜ್ಜೆಯಾಗಿ ಲೋಕಸಭಾಧ್ಯಕ್ಷ ಓಂ ಬಿರ್ಲಾ ಅವರು ೬೦ಕ್ಕೂ ಹೆಚ್ಚು ದೇಶಗಳೊಂದಿಗೆ ಸಂಸದೀಯ ಸ್ನೇಹ ಗುಂಪುಗಳನ್ನು ರಚಿಸಿದ್ದಾರೆ.

ಈ ಕ್ರಮವು ಜಗತ್ತಿನಾದ್ಯಂತ ಶಾಸಕಾಂಗಗಳೊಂದಿಗೆ ಸಂವಾದ ಮತ್ತು ವಿಚಾರ ವಿನಿಮಯವನ್ನು ಹೆಚ್ಚಿಸಲು ಹಾಗೂ ನಿರಂತರ ಸಂಸದೀಯ ಸಂವಹನದೊಂದಿಗೆ ಸಾಂಪ್ರದಾಯಿಕ ರಾಜತಾಂತ್ರಿಕತೆಗೆ ಪೂರಕವಾಗಿ ಸಂಸತ್ತಿನ ಪ್ರಜ್ಞಾಪೂರ್ವಕ ಪ್ರಯತ್ನವನ್ನು ಪ್ರತಿಬಿಂಬಿಸುತ್ತದೆ. ಈ ಸ್ನೇಹ ಗುಂಪುಗಳು ವಿವಿಧ ದೇಶಗಳ ಸಂಸತ್ ಸದಸ್ಯರನ್ನು ಒಟ್ಟುಗೂಡಿಸುತ್ತದೆ.

ಹಿರಿಯ ಸಂಸದರಾದ ರವಿಶಂಕರ್ ಪ್ರಸಾದ್, ಡಾ.ಎಂ.ತಂಬಿದೊರೈ, ಪಿ.ಚಿದಂಬರಂ, ರಾಮ್‌ಗೋಪಾಲ್ ಯಾದವ್, ಟಿ.ಆರ್.ಬಾಲು, ಕನಿಮೋಳಿ, ಅಸಾದುದ್ದೀನ್ ಒವೈಸಿ, ಸಸ್ಮಿತ್ ಪಾತ್ರ, ಶ್ರೀಕಾಂತ್ ಏಕನಾಥ್ ಶಿಂಧೆ, ರಾಜೀವ್ ಪ್ರತಾಪ್ ರೂಡಿ, ಪ್ರಫುಲ್ ಪಟೇಲ್ ಸೇರಿದಂತೆ ಇತರರು ಈ ಗುಂಪುಗಳನ್ನು ಮುನ್ನಡೆಸಲಿದ್ದಾರೆ.

ಶ್ರೀಲಂಕಾ, ಜರ್ಮನಿ, ನ್ಯೂಜಿಲೆಂಡ್, ದಕ್ಷಿಣ ಆಫ್ರಿಕಾ, ಭೂತಾನ್, ಸೌದಿ ಅರೇಬಿಯಾ, ಇಸ್ರೇಲ್, ಅಮೆರಿಕಾ, ರಷ್ಯಾ, ದಕ್ಷಿಣ ಕೊರಿಯಾ, ನೇಪಾಳ, ಬ್ರಿಟನ್, ಫ್ರಾನ್ಸ್, ಜಪಾನ್, ಇಟಲಿ, ಆಸ್ಟ್ರೇಲಿಯಾ, ಸಿಂಗಾಪುರ, ಬ್ರೆಜಿಲ್ ಸೇರಿದಂತೆ ೬೦ಕ್ಕೂ ಹೆಚ್ಚು ದೇಶಗಳ ಸಂಸದೀಯ ಸ್ನೇಹ ಗುಂಪುಗಳನ್ನು ರಚಿಸಲಾಗಿದೆ.

****************

ಭಾರತದ ಮೊದಲ ಭಾರತೀಯ ಗವರ್ನರ್ ಜನರಲ್ ಚಕ್ರವರ್ತಿ ರಾಜಗೋಪಾಲಾಚಾರಿ ಅವರ ಜೀವನ ಮತ್ತು ಪರಂಪರೆ ಆಚರಣೆಯಾದ ರಾಜಾಜಿ ಉತ್ಸವವನ್ನು ನವದೆಹಲಿಯ ರಾಷ್ಟ್ರಪತಿ ಭವನದಲ್ಲಿ ಆಚರಿಸಲಾಗುತ್ತಿದೆ. ಈ ಸಂದರ್ಭದಲ್ಲಿ ರಾಷ್ಟ್ರಪತಿ ಭವನದಲ್ಲಿ ರಾಜಗೋಪಾಲಾಚಾರಿ ಅವರ ಪ್ರತಿಮೆಯನ್ನು ರಾಷ್ಟ್ರಪತಿ ದ್ರೌಪದಿ ಮುರ್ಮು ಅನಾವರಣಗೊಳಿಸಿದರು.

ಈ ವೇಳೆ ಉಪರಾಷ್ಟ್ರಪತಿ ಸಿ.ಪಿ.ರಾಧಾಕೃಷ್ಣನ್, ಕೇಂದ್ರ ಸಚಿವರಾದ ಜೆ.ಪಿ.ನಡ್ಡಾ, ಡಾ.ಎಸ್.ಜೈಶಂಕರ್, ಧರ್ಮೇಂದ್ರ ಪ್ರಧಾನ್, ಗಜೇಂದ್ರಸಿಂಗ್ ಶೇಖಾವತ್, ಡಾ.ಎಲ್.ಮುರುಗನ್ ಸೇರಿದಂತೆ ಚಕ್ರವರ್ತಿ ರಾಜಗೋಪಾಲಾಚಾರಿ ಅವರ ಕುಟುಂಬದ ಸದಸ್ಯರು ಉಪಸ್ಥಿತರಿದ್ದರು.

ಸಭೆಯನ್ನು ಉದ್ದೇಶಿಸಿ ಮಾತನಾಡಿದ ರಾಷ್ಟ್ರಪತಿ ದ್ರೌಪದಿ ಮುರ್ಮು, ಚಕ್ರವರ್ತಿ ರಾಜಗೋಪಾಲಾಚಾರಿ ಅವರು ಭಾರತದ ಹೆಮ್ಮೆಯ ಪುತ್ರ. ಕಾನೂನು ವೃತ್ತಿ, ಸ್ವಾತಂತ್ರ್ಯ ಹೋರಾಟ, ಸಾಮಾಜಿಕ ಮತ್ತು ಆರ್ಥಿಕ ಸುಧಾರಣೆಗಳು, ಪ್ರಾಚೀನ ಭಾರತೀಯ ಗ್ರಂಥಗಳು, ರಾಜಕೀಯ ಮತ್ತು ಆಡಳಿತಕ್ಕೆ ಅವರ ಕೊಡುಗೆ ಅಪಾರ ಎಂದು ಹೇಳಿದರು.

ಕೇಂದ್ರ ವಾರ್ತಾ ಮತ್ತು ಪ್ರಸಾರ ಖಾತೆ ರಾಜ್ಯ ಸಚಿವ ಡಾ.ಎಲ್.ಮುರುಗನ್ ಮಾತನಾಡಿ, ರಾಜಾಜಿ ಅವರ ಬುದ್ಧಿವಂತಿಕೆ, ನೈತಿಕ ಧೈರ್ಯ ಮತ್ತು ರಾಷ್ಟ್ರೀಯ ಸೇವೆಗೆ ಅವರ ಅಚಲ ಬದ್ಧತೆ ಎಲ್ಲಾ ಪೀಳಿಗೆಗೆ ಸ್ಫೂರ್ತಿ ನೀಡುತ್ತದೆ. ರಾಮಾಯಣ ಮತ್ತು ಮಹಾಭಾರತವನ್ನು ಇಂಗ್ಲಿಷ್ ಮತ್ತು ತಮಿಳು ಭಾಷೆಗೆ ಅನುವಾದಿಸುವ ಮೂಲಕ ಅವರು ಸಾಂಸ್ಕೃತಿಕ ನಿರ್ಮಾಪಕರಾಗಿದ್ದರು ಎಂದು ಶ್ಲಾಘಿಸಿದರು.

****************

ನವದೆಹಲಿಯಲ್ಲಿ ಇಂದು ಭಾರತ್ ಟ್ಯಾಕ್ಸಿ ಚಾಲಕರೊಂದಿಗೆ ಕೇಂದ್ರ ಸಹಕಾರ ಸಚಿವ ಅಮಿತ್ ಶಾ ಸಂವಾದ ನಡೆಸಿದರು.

ಈ ವೇಳೆ ಮಾತನಾಡಿದ ಅವರು, ಭಾರತ್ ಟ್ಯಾಕ್ಸಿ ಸಹಕಾರಿ ಸಂಸ್ಥೆಯು ಚಾಲಕರಿಗೆ ಅವರ ಕೆಲಸದ ಮಾಲೀಕತ್ವವನ್ನು ಒದಗಿಸುವ ಮೂಲಕ ಅವರನ್ನು ಸಬಲೀಕರಣಗೊಳಿಸುವುದಾಗಿದೆ. ಈ ಉಪಕ್ರಮವು ಖಾಸಗಿ ಟ್ಯಾಕ್ಸಿ ಸೇವಾ ಕಂಪನಿಗಳಿಗೆ ಸಂಬಂಧಿಸಿದ ಸಮಸ್ಯೆಗಳನ್ನು ನಿಗ್ರಹಿಸಲು ಮತ್ತು ಚಾಲಕರಿಗೆ ಲಾಭ ಒದಗಿಸಲು ಕೇಂದ್ರೀಕರಿಸುತ್ತದೆ ಎಂದು ಹೇಳಿದರು.

ಈ ಉಪಕ್ರಮವು ಚಾಲಕರ ಕಲ್ಯಾಣ ಮತ್ತು ಪ್ರಯಾಣಿಕರ ಸುರಕ್ಷತೆಗಾಗಿ ವೇದಿಕೆಯಾಗಿದೆ. ಭಾರತ್ ಟ್ಯಾಕ್ಸಿ ಆಪ್ ಮೂಲಕ ಪ್ರತಿಯೊಂದು ಮಾಹಿತಿಯನ್ನು ಚಾಲಕರಿಗೆ ಅಧಿಸೂಚನೆ ನೀಡಲಾಗಿದೆ. ಇದು ವಿಶ್ವದ ಅತ್ಯಂತ ಪಾರದರ್ಶಕ ಕ್ಯಾಬ್ ಸೇವೆಯಾಗಲಿದೆ ಎಂದರು.

ಭಾರತ್ ಟ್ಯಾಕ್ಸಿ ಆಪ್‌ನಲ್ಲಿರುವ ಸಾರಥಿ ದೀದಿ ವೈಶಿಷ್ಟ್ಯದ ಮೂಲಕ ಮಹಿಳಾ ಪ್ರಯಾಣಿಕರು ಕ್ಯಾಬ್ ಸೇವೆಗಾಗಿ ಮಹಿಳಾ ಚಾಲಕರನ್ನು ಆಯ್ಕೆ ಮಾಡಬಹುದು. ಇದೇ ವೇಳೆ, ಭಾರತ್ ಟ್ಯಾಕ್ಸಿಯ ಚಾಲಕರು ವಿಮಾ ಪ್ರಯೋಜನಗಳು ಮತ್ತು ಸುಲಭ ಸಾಲ ಸೌಲಭ್ಯಗಳನ್ನು ಪಡೆಯಲಿದ್ದಾರೆ ಎಂದು ಸಚಿವ ಅಮಿತ್ ಶಾ ತಿಳಿಸಿದರು.

ಧ್ವನಿ: ಅಮಿತ್ ಶಾ

****************

ಭಾರತ, ವಿಶ್ವದ ಮೂರನೇ ಅತಿ ದೊಡ್ಡ ಆರ್ಥಿಕತೆಯಾಗುವ ಹಾದಿಯಲ್ಲಿದೆ. ಈ ಬೆಳವಣಿಗೆಯು ಹೂಡಿಕೆದಾರರ ಸಂಖ್ಯೆಯಲ್ಲಿ ಹೆಚ್ಚಳಕ್ಕೂ ಕಾರಣವಾಗಲಿದೆ ಎಂದು ಸೆಬಿ ಅಧ್ಯಕ್ಷ ತುಹಿನ್ ಕಾಂತ ಪಾಂಡೆ ಹೇಳಿದ್ದಾರೆ.

ಮುಂಬೈನಲ್ಲಿಂದು ಆಯೋಜಿಸಲಾದ ಪಿಎಂಎಸ್ ಶೃಂಗಸಭೆ ಉದ್ದೇಶಿಸಿ ಮಾತನಾಡಿದ ಅವರು, ಪೋರ್ಟ್‌ಫೋಲಿಯೊ ಮ್ಯಾನೇಜ್‌ಮೆಂಟ್ ಸರ್ವೀಸಸ್ ಉದ್ಯಮವು ಈ ಬೇಡಿಕೆಯನ್ನು ಪೂರೈಸಲು ಉತ್ತಮ ಸ್ಥಾನದಲ್ಲಿದೆ. ಪಿಎಂಎಸ್ ಸಂಸ್ಥೆಗಳು ಕೇಂದ್ರೀಕೃತ ಹೆಚ್ಚಿನ ಪಾಲನ್ನು ಹೊಂದಿರುವ ಪೋರ್ಟ್‌ಫೋಲಿಯೊಗಳನ್ನು ನಿರ್ವಹಿಸುತ್ತವೆ ಎಂದು ತಿಳಿಸಿದರು.

****************

ಭಾರತವನ್ನು ವೈದ್ಯಕೀಯ ಪ್ರವಾಸೋದ್ಯಮಕ್ಕಾಗಿ ಆದ್ಯತೆಯ ಜಾಗತಿಕ ತಾಣವಾಗಿಸಲು ಸರ್ಕಾರ ಅನೇಕ ಕ್ರಮಗಳನ್ನು ಕೈಗೊಂಡಿದೆ ಎಂದು ಕೇಂದ್ರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ಜೆ.ಪಿ.ನಡ್ಡಾ ತಿಳಿಸಿದ್ದಾರೆ.

ನವದೆಹಲಿಯಲ್ಲಿ ಇಂದು ನಡೆದ ಅಡ್ವಾಂಟೇಂಜ್ ಹೆಲ್ತ್ ಕೇರ್ ಇಂಡಿಯಾದ ಲನೇ ಆವೃತ್ತಿ ಉದ್ದೇಶಿಸಿ ವಿಡಿಯೋ ಕಾನ್ಫರೆನ್ಸ್ ಮೂಲಕ ಮಾತನಾಡಿದ ಅವರು, ಹೆಚ್ಚು ನುರಿತ ವೈದ್ಯಕೀಯ ವೃತ್ತಿಪರರು ಮತ್ತು ಆಧುನಿಕ ಆರೋಗ್ಯ ಮೂಲಸೌಕರ್ಯವು ಹೃದ್ರೋಗ, ಕ್ಯಾನ್ಸರ್ ಚಿಕಿತ್ಸೆ, ಅಂಗಾಂಗ ಕಸಿ, ಮೂಳೆ ಚಿಕಿತ್ಸೆ, ನರವಿಜ್ಞಾನ ಸೇರಿದಂತೆ ವ್ಯಾಪಕ ಶ್ರೇಣಿಯ ಸುಧಾರಿತ ಚಿಕಿತ್ಸೆಯನ್ನು ನೀಡುತ್ತಿದೆ ಎಂದು ಹೇಳಿದರು.

ಕೇಂದ್ರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ರಾಜ್ಯ ಸಚಿವ ಪ್ರತಾಪ್ ರಾವ್ ಜಾಧವ್ ಮಾತನಾಡಿ, ದೇಶದ ಆರೋಗ್ಯ ಪರಿಸರ ವ್ಯವಸ್ಥೆಯು ಕ್ರಿಯಾತ್ಮಕ ಹಾಗೂ ಸಮಗ್ರ ವ್ಯವಸ್ಥೆಯಾಗಿ ವಿಕಸನಗೊಂಡಿದೆ ಎಂದು ತಿಳಿಸಿದರು.

****************

ಭಾರತೀಯ ಚುನಾವಣಾ ಆಯೋಗವು ನವದೆಹಲಿಯಲ್ಲಿ ನಾಳೆ ಚುನಾವಣಾ ಆಯುಕ್ತರು ಮತ್ತು ರಾಜ್ಯ ಚುನಾವಣಾ ಆಯುಕ್ತರ ರಾಷ್ಟ್ರೀಯ ದುಂಡು ಮೇಜಿನ ಸಮ್ಮೇಳನವನ್ನು ಆಯೋಜಿಸಿದೆ.

ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ಸಮ್ಮೇಳನದ ಅಧ್ಯಕ್ಷತೆ ವಹಿಸಲಿದ್ದು, ಎಲ್ಲಾ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳ ಮುಖ್ಯ ಚುನಾವಣಾ ಅಧಿಕಾರಿಗಳು, ರಾಜ್ಯ ಚುನಾವಣಾ ಆಯುಕ್ತರು, ಕಾನೂನು ಮತ್ತು ತಾಂತ್ರಿಕ ತಜ್ಞರು ಸಮ್ಮೇಳನದಲ್ಲಿ ಭಾಗವಹಿಸಲಿದ್ದಾರೆ.

ಚುನಾವಣಾ ಕ್ರಿಯೆಗಳನ್ನು ಬಲಪಡಿಸುವ ಬಗ್ಗೆ ಮತ್ತು ತಂತ್ರಜ್ಞಾನ, ಇವಿಎಂಗಳು ಮತ್ತು ಮತದಾರರ ಪಟ್ಟಿಗಳ ಹಂಚಿಕೆಯ ಬಗ್ಗೆ ಚರ್ಚೆ ನಡೆಯಲಿದೆ ಎಂದು ಆಯೋಗ ತಿಳಿಸಿದೆ.

****************

ಗೋವಾ ಮುಖ್ಯಮಂತ್ರಿ ಪ್ರಮೋದ್ ಸಾವಂತ್ ಅವರಿಂದು ಡೋನಾ ಪೌಲೊದಲ್ಲಿ ಜಾಗತಿಕ ಸಮುದ್ರ ವಿಜ್ಞಾನ ಸಮ್ಮೇಳನ ೨೦೨೬ ಅನ್ನು ಉದ್ಘಾಟಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಅವರು, ಸಮುದ್ರದ ಭವಿಷ್ಯ, ಸಾವಯವ ಕಡಲ ಆರ್ಥಿಕತೆ ಮತ್ತು ತಾಪಮಾನ ಏರಿಕೆಯ ನಿಯಂತ್ರಣ ವಿಷಯಗಳನ್ನು ಈ ಬಾರಿಯ ಜಾಗತಿಕ ಸಮುದ್ರ ವಿಜ್ಞಾನ ಸಮ್ಮೇಳನ ಹೊಂದಿದೆ. ದೇಶದ ಶೇಕಡ ೨೫ ರಷ್ಟು ಜನಸಂಖ್ಯೆ ಸಮುದ್ರ ಭಾಗದಲ್ಲಿ ಬದುಕು ನಡೆಸುತ್ತಿದ್ದು, ಇಂತಹ ಸಮ್ಮೇಳನಗಳು ಮೀನುಗಾರಿಕೆ, ಪ್ರವಾಸೋದ್ಯಮ ಮತ್ತು ಸಮುದ್ರ ಮೂಲ ಆರ್ಥಿಕತೆ ವಿಷಯವಾಗಿ ಬಹುಮುಖ್ಯವಾಗಿದೆ ಎಂದು ಅವರು ಅಭಿಪ್ರಾಯಪಟ್ಟರು.

****************

ಪ್ರಧಾನಿ ನರೇಂದ್ರ ಮೋದಿ ಅವರನ್ನು ಸ್ವಾಗತಿಸಲು ಇಸ್ರೇಲ್ ಉತ್ಸುಕವಾಗಿದೆ ಎಂದು ಭಾರತಕ್ಕೆ ಇಸ್ರೇಲ್ ರಾಯಭಾರಿ ರುವೆನ್ ಅಜರ್ ಹೇಳಿದ್ದಾರೆ.

ಸಾಮಾಜಿಕ ಜಾಲತಾಣದಲ್ಲಿ ಅವರು, ಭಾರತ-ಇಸ್ರೇಲ್ ಮುಕ್ತ ವ್ಯಾಪಾರ ಒಪ್ಪಂದಕ್ಕೆ ಎರಡೂ ದೇಶಗಳು ಮುಂದಾಗಿವೆ. ಪ್ರಧಾನಿ ನರೇಂದ್ರ ಮೋದಿ ಅವರ ಇಸ್ರೇಲ್ ಭೇಟಿ ಸಮಯದಲ್ಲಿ ಭದ್ರತಾ ಒಪ್ಪಂದಗಳನ್ನು ನವೀಕರಿಸುವ ಮೂಲಕ ಉಭಯ ದೇಶಗಳ ನಡುವಿನ ರಕ್ಷಣಾ ಪಾಲುದಾರಿಕೆ ಬಲಪಡಿಸಲಾಗುತ್ತದೆ ಎಂದು ತಿಳಿಸಿದರು.

****************

ದೇಶದ ರಾಜಧಾನಿ ದೆಹಲಿಯ ವಾಯುಗುಣಮಟ್ಟ ಖಾತ್ರಿಗಾಗಿ ದೆಹಲಿ-ಎನ್‌ಸಿಆರ್‌ನ ಹೊರಗೆ ಕಲ್ಲಿದ್ದಲು ಆಧಾರಿತ ಕಾರ್ಖಾನೆಗಳನ್ನು ಸ್ಥಳಾಂತರಿಸುವ ಬಗ್ಗೆ ಸುಪ್ರೀಂ ಕೋರ್ಟ್ ಸಂಬಂಧಿಸಿದ ಸಚಿವಾಲಯಗಳ ಪ್ರತಿಕ್ರಿಯೆ ಕೇಳಿದೆ.

ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಸೂರ್ಯ ಕಾಂತ್ ಹಾಗೂ ನ್ಯಾಯಮೂರ್ತಿಗಳಾದ ಜೊಯ್‌ಮಲ್ಯ ಬಗ್ಚಿ ಮತ್ತು ವಿಪುಲ್ ಎಂ.ಪಾಂಚೋಲಿ ಅವರಿದ್ದ ನ್ಯಾಯಪೀಠ, ಎನ್‌ಸಿಆರ್ ಪ್ರದೇಶದ ಗಾಳಿಯ ಗುಣಮಟ್ಟ ಸುಧಾರಣೆಗಾಗಿ ಈ ಪ್ರತಿಕ್ರಿಯೆಯನ್ನು ಕೇಳಿದೆ.

ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣಾ ಸಚಿವಾಲಯ, ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವಾಲಯ ಹಾಗೂ ಇಂಧನ ಸಚಿವಾಲಯಗಳನ್ನು ದೆಹಲಿಯ ೩೦೦ ಕಿಲೋಮೀಟರ್ ಒಳಗೆ ಹೊಸದಾಗಿ ಯಾವುದೇ ಕಲ್ಲಿದ್ದಲು ಆಧಾರಿತ ಕೈಗಾರಿಕೆಗಳ ಕಾರ್ಯಾಚರಣೆಗೆ ಅವಕಾಶ ನೀಡದಿರುವ ಬಗೆಗೆ ಪ್ರತಿಕ್ರಿಯೆ ಕೇಳಿದೆ.

ವಾಯುಗುಣಮಟ್ಟ ನಿರ್ವಹಣಾ ಆಯೋಗ-ಸಿಎಕ್ಯೂಎಂ ನೀಡಿರುವ ವಾಹನಗಳಿಂದ ಆಗುತ್ತಿರುವ ಕಲುಷಿತ ಬಗೆಗಿನ ಅಭಿಪ್ರಾಯವನ್ನು ಮಾರ್ಚ್ ೧೨ ರಂದು ನ್ಯಾಯಪೀಠ ಪರಿಶೀಲಿಸಲಿದೆ.

****************

ಮಾಜಿ ಸಚಿವ ಮುಕುಲ್ ರಾಯ್ ಕೋಲ್ಕತ್ತಾದ ಖಾಸಗಿ ಆಸ್ಪತ್ರೆಯಲ್ಲಿ ಇಂದು ನಿಧನರಾಗಿದ್ದಾರೆ. ಅವರಿಗೆ ೭೧ ವರ್ಷ ವಯಸ್ಸಾಗಿತ್ತು.

ಮುಕುಲ್ ರಾಯ್ ನಿಧನಕ್ಕೆ ಪ್ರಧಾನಿ ನರೇಂದ್ರ ಮೋದಿ, ಕೇಂದ್ರ ಗೃಹ ಸಚಿವ ಅಮಿತ್ ಶಾ ಸೇರೊದಂತೆ ಅನೇಕ ಗಣ್ಯರು ಸಂತಾಪ ಸೂಚಿಸಿದ್ದಾರೆ.

****************

ಮುಂಬೈನ ವಾಂಖೆಡೆ ಕ್ರೀಡಾಂಗಣದಲ್ಲಿ ಇಂದು ನಡೆಯಲಿರುವ ಐಸಿಸಿ ಪುರುಷರ ಟಿ-೨೦ ವಿಶ್ವಕಪ್ ಕ್ರಿಕೆಟ್‌ನ ಸೂಪರ್ ಲರ ಹಂತದ ಗುಂಪು ೧ ರ ಪಂದ್ಯದಲ್ಲಿ ಜಿಂಬಾಬ್ವೆ ಮತ್ತು ವೆಸ್ಟ್ ಇಂಡೀಸ್ ತಂಡಗಳು ಮುಖಾಮುಖಿಯಾಗಿವೆ.

ಟಾಸ್ ಗೆದ್ದ ಜಿಂಬಾಬ್ವೆ ತಂಡ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿದೆ.

ಮೊದಲು ಬ್ಯಾಟಿಂಗ್ ಮಾಡುತ್ತಿರುವ ವೆಸ್ಟ್ ಇಂಡಿಸ್ ಇತ್ತೀಚಿನ ವರದಿ ಬಂದಾಗ, ೭ ಓವರ್‌ಗಳಲ್ಲಿ ೨ ವಿಕೆಟ್ ನಷ್ಟಕ್ಕೆ ೫೫ ರನ್ ಮಾಡಿ ಆಡುತ್ತಿದೆ.

********ಮುಕ್ತಾಯ********